2016 ಕ.ತೀ.ವ 134

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ

ಸಿದ್ಧಾರ್ಥ –ವಿರುದ್ಧ– ಕರ್ನಾಟಕ ರಾಜ್ಯದ ಪರವಾಗಿ ಹೊಕರಣ ಪೊಲೀಸ್ ಠಾಣೆ, ಬೀದರ್*

ದಂಡ ಪ್ರಕ್ರಿಯಾ ಸಂಹಿತೆ ಕಲಂ 439 ರಡಿಯಲ್ಲಿ ಕ್ರಿಮಿನಲ್ ಅರ್ಜಿ
**I.P.C Sections** 34, 344, 345, 347, 365, 366, 367, 368 ಹಾಗೂ 370 (2).

**ಅರ್ಜಿದಾರರ ವಿರುದ್ಧ ಭಾರತ ದಂಡ ಸಂಹಿತೆ ಕಲಂ 34 ರ ಜೊತೆಗೋದಿದಂತೆ ಕಲಂ 344, 345, 347, 365, 366, 367, 368 ಹಾಗೂ 370(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವರೆಂದು ಎದುರುದಾರರು ದಾಖಲಿಸಿದ ಕ್ರಿಮಿನಲ್ ಪ್ರಕರಣದಲ್ಲಿ ಜಾಮೀನು ನೀಡಬೇಕೆಂದು ಕೋರಿ ಸದರಿ ಕ್ರಿಮಿನಲ್ ಅರ್ಜಿ. ಪ್ರಾಸಿಕ್ಯೂಷನ್ ಅಧಿವಿಚಾರಣಾ ನ್ಯಾಯಾಲಯದಲ್ಲಿ ಸಲ್ಲಿಸಿದ ಪ್ರಥಮ ವರ್ತಮಾನ ವರದಿಯಲ್ಲಿ ಅರ್ಜಿದಾರರ ಪೂರ್ವನಡತೆಯ ಬಗ್ಗೆ ಯಾವುದೇ ಮಾಹಿತಿಯನ್ನು ಒದಗಿಸಿಲ್ಲ. ಈ ಕಾರಣದಿಂದ ಸದರಿ ಅರ್ಜಿಯನ್ನು ಉಚ್ಚನ್ಯಾಯಾಲಯವು ಪುರಸ್ಕರಿಸಿ ಆದೇಶಿಸಿದೆ.**

ಅರ್ಜಿದಾರರ ಪರ: ಶ್ರೀ ಕೆ.ಎಂ. ಘಾಟೆ, ವಕೀಲರು;
ಪ್ರತ್ಯರ್ಜಿದಾರರ ಪರ: ಶ್ರೀ ಪ್ರಕಾಶ್ ಯೆಲಿ, ಹೆಚ್ಚುವರಿ ರಾಜ್ಯ ಅಭಿಯೋಜಕರು.

*ಕ್ರಿ.ಅ.ಸಂ. 200718/2015, ದಿನಾಂಕ: 31ನೇ ಜುಲೈ, 2015.

**ಆಜ್ಞೆ**

**ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ:**

ಭಾರತ ದಂಡ ಸಂಹಿತೆಯ ಕಲಂ 34 ರ ಜೊತೆಗೋದಿದಂತೆ ಕಲಂ 344, 345, 347, 365, 366, 367, 368, 370(2) ರಡಿಯಲ್ಲಿನ ಅಪರಾಧಗಳಿಗಾಗಿ, ಹೊಕರಣ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ 70/2015 ಕ್ಕೆ ಸಂಬಂಧಿಸಿದಂತೆ ಜಾಮೀನು ನೀಡಿಕೆಗಾಗಿ ಅರ್ಜಿದಾರನು ಈ ನ್ಯಾಯಾಲಯದ ಮೊರೆ ಹೋಗಿದ್ದಾನೆ.

2. ಅರ್ಜಿದಾರನ ವಿರುದ್ಧದ ಆಪಾದನೆಯೆಂದರೆ, ಅವನು ಬಹಳ ಹಿಂದೆ ದೂರುದಾರನ ಮಗಳಾದ, ಗಣೇಶಪುರ (ಯು) ಗ್ರಾಮದ ಗೋಪಾಲ ಚಿಕಲೆಯವರ ಪತ್ನಿಯಾದ ಕವಿತಳನ್ನು ಅಪಹರಿಸಿ, ಕರೆದೊಯ್ದಿದ್ದಾನೆ ಎಂಬುದಾಗಿದೆ. ದೂರಿನಲ್ಲಿ, ಸದರಿ ಕವಿತಳ ಪತಿಯಾದ ಗೋಪಾಲ್ ಎಂಬಾತ ತನ್ನ ಪತ್ನಿ ಹಾಗೂ ಮಗಳು ತನ್ನ ಮನೆಯಿಂದ ಕಾಣೆಯಾಗಿದ್ದಾರೆಂದು 02.11.2014 ರಂದು ದೂರು ದಾಖಲಿಸಿದ್ದಾನೆಂದು ಹಾಗೂ ಈ ಸಂಬಂಧ, ಆತ ಕೆಲವು ಕರಪತ್ರಗಳನ್ನು ಸಹ ಹಂಚಿದ್ದಾನೆ 02.11.2014 ರಿಂದ 3-4 ದಿನಗಳ ನಂತರ, ಈ ಅರ್ಜಿದಾರನು ಸದರಿ ಕವಿತಳನ್ನು ಒತ್ತಾಯದಿಂದ ಮುಂಬೈಗೆ ಕರೆದೊಯ್ದಿದ್ದಾನೆಂದು ಮತ್ತು ಅವಳನ್ನು ತನ್ನ ಮನೆಯಲ್ಲಿ ಅಕ್ರಮವಾಗಿ ಕೂಡಿಹಾಕಿ, ತನ್ನ ಅಕ್ರಮ ಲಾಭಕ್ಕಾಗಿ ಅವಳನ್ನು ವೇಶ್ಯಾವಾಟಿಕೆಯ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಿದ್ದಾನೆಂದು ಆತನಿಗೆ ಗೊತ್ತಾಗಿದೆಯೆಂದು ಹೇಳಲಾಗಿದೆ. ಆದುದರಿಂದ, ಸದರಿ ಕವಿತ ಎಂಬ ಮಹಿಳೆಯ ತಂದೆಯು, ದೂರುದಾರ ಮತ್ತು ಇತರರು 05.06.2015 ರಂದು ಮುಂಬೈನ ಘಟ್ಕೋಪರ್ ಪ್ರದೇಶದಲ್ಲಿ ಕವಿತಳನ್ನು ಹುಡುಕುತ್ತಾ ಈ ಅರ್ಜಿದಾರನ ಮನೆಗೆ ಹೋದರು ಮತ್ತು ಅರ್ಜಿದಾರ ಹಾಗೂ ದೂರುದಾರನ ಮಗಳಾದ ಕವಿತ ಸಹ ಸದರಿ ಮನೆಯಲ್ಲಿದ್ದುದನ್ನು ಕಂಡರು ಎಂಬುದಾಗಿ ಹೇಳಿಕೆ ನೀಡಿ, 06.06.2015 ರಂದು ದೂರುದಾಖಲಿಸಿದ್ದಾರೆ. ದೂರುದಾರನು ನೀಡಿದ ಮಾಹಿತಿಯ ಮೇರೆಗೆ, ಕೂಡಲೇ ಪೊಲೀಸರು ಸದರಿ ಮಹಿಳೆಯನ್ನು ರಕ್ಷಿಸಿದ್ದಾರೆ ಹಾಗೂ ಅರ್ಜಿದಾರನನ್ನು

ತಮ್ಮ ವಶಕ್ಕೆ ಪಡೆದಿದ್ದಾರೆ. ಅರ್ಜಿದಾರನನ್ನು 06.06.2015 ರಂದು ಅಧಿಕಾರವ್ಯಾಪ್ತಿಯ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು ಹಾಗೂ ಪುನರ್ವಿಚಾರಣೆಗಾಗಿ ನ್ಯಾಯಿಕ ಅಭಿರಕ್ಷೆಗೆ ವಾಪಸ್ಸು ಕಳಿಸಲಾಯಿತು.

3. ನ್ಯಾಯಾಲಯದ ಮುಂದೆ ಸಲ್ಲಿಸಲಾದ 06.06.2015 ರ ಹವಾಲತ್ತು ಅರ್ಜಿಯು, ಪೊಲೀಸರು ಸದರಿ ಕವಿತಳನ್ನು ರಕ್ಷಿಸುವ ದಿನಾಂಕದಂದು ಇದ್ದಂತೆ ಸದರಿ ಕವಿತಳ ಹೇಳಿಕೆಯನ್ನು ದಾಖಲಿಸಿದ್ದಾರೆಯೇ? ಮತ್ತು ಅರ್ಜಿದಾರನು ಅವಳನ್ನು ಅಪಹರಿಸಿದ್ದಾನೆಯೆ? ಅಥವಾ ಯಾವುದೇ ಅಕ್ರಮ ಮಾನವ ಕಳ್ಳಸಾಗಾಣಿಕೆಯ ಉದ್ದೇಶಕ್ಕಾಗಿ ಅವಳನ್ನು ಮುಂಬೈಗೆ ಕರೆದೊಯ್ದಿದ್ದಾನೆಯೇ? ಎಂಬುದನ್ನು ಖಚಿತಪಡಿಸಿಕೊಳ್ಳುವ ಸಂಬಂಧದಲ್ಲಿ ಪೊಲೀಸರು ಯಾವುದೇ ತನಿಖೆ ನಡೆಸಿರುವರೆ? ಎಂಬುದನ್ನು ದೃಢಪಡಿಸುವುದಿಲ್ಲ.

4. ಕ್ರಿ.ಸಂ. ಸಂಖ್ಯೆ 516/2015 ರಲ್ಲಿ ಅರ್ಜಿದಾರನು ಬೀದರ್‌ನ ಸೆಷನ್ಸ್ ನ್ಯಾಯಾಧೀಶರ ಮುಂದೆ ಜಾಮೀನಿಗಾಗಿ ಮೊರೆಹೋಗಿದ್ದಾನೆ. ಮಾನ್ಯ ಸೆಷನ್ಸ್ ನ್ಯಾಯಾಧೀಶರು ಅಪರಾಧಗಳು ಗಂಭೀರ ಸ್ವರೂಪದ್ದಾಗಿವೆ ಹಾಗೂ ತನಿಖೆ ಇನ್ನೂ ನಡೆಯುತ್ತಿದೆ. ಆದುದರಿಂದ, ಜಾಮೀನು ಅರ್ಜಿಯು ತಿರಸ್ಕರಿಸಲು ಯೋಗ್ಯವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಸದರಿ ಅರ್ಜಿಯು ಇತ್ಯರ್ಥದಲ್ಲಿರುವ ಸಮಯದಲ್ಲಿ, ಪೊಲೀಸರು ತಾವು ಸಂಗ್ರಹಿಸಿದ ಸಾಕ್ಷ್ಯಾಧಾರಗಳಾವುವು? ಎಂಬುದನ್ನು ತೋರಿಸಲು, ಯಾವುದೇ ಸಾಕ್ಷ್ಯಾಧಾರಗಳನ್ನು ಅದರಲ್ಲೂ ನಿರ್ದಿಷ್ಟವಾಗಿ ತೊಂದರೆಗೆ ಸಿಲುಕಿದ್ದ ಮಹಿಳೆಯ ಯಾವುದೇ ಹೇಳಿಕೆಯನ್ನು ಹಾಜರುಪಡಿಸಿಲ್ಲವೆಂದು ಸಹ ಕಂಡುಬಂದಿದೆ. ನ್ಯಾಯಾಲಯವು ಮೊಕದ್ದಮೆಯ ದಿನಚರಿಯನ್ನು ಅವಲೋಕಿಸಿದೆಯೆಂದು ಹಾಗೂ ಆದೇಶವನ್ನು ಜಾರಿಮಾಡಿದೆಯೆಂದು ತೋರಿಸಲು ಯಾವುದೇ ಸಾಕ್ಷ್ಯಾಧಾರವಿಲ್ಲ. ದಂಡ ಪ್ರಕ್ರಿಯಾ ಸಂಹಿತೆಯ 439 ನೇ ಪ್ರಕರಣದಡಿ ಸಲ್ಲಿಸಲಾದ ಎಲ್ಲಾ ಪ್ರಕರಣಗಳಲ್ಲಿ, ತನಿಖೆಯ ಇತ್ಯರ್ಥದ ಅವಧಿಯಲ್ಲಿ, ಪ್ರಾಸಿಕ್ಯೂಟಿಂಗ್ ಏಜೆನ್ಸಿಯು, ಅಪರಾಧದಲ್ಲಿ ಆಪಾದಿತನು ಭಾಗಿಯಾಗಿರುವುದನ್ನು ತೋರಿಸಲು ಸಂಬಂಧಪಡುವ ಸಾಕ್ಷ್ಯಾಧಾರಗಳನ್ನು ಹಾಜರುಪಡಿಸಬೇಕಿರುತ್ತದೆ ಅಥವಾ ತನಿಖೆಯ ಅವಧಿಯಲ್ಲಿ ಆಪಾದಿತನ ವಿರುದ್ಧ ಅವನ ಸ್ವಾತಂತ್ರ್ಯವನ್ನು

ಮೊಟಕುಗೊಳಿಸುವ ಹಾಗೂ ಅಂಥ ಅವಧಿಗಾಗಿ ಅವನನ್ನು ಜೈಲಿನಲ್ಲಿಡುವ ಸಲುವಾಗಿ ಯಾವುವಾದರೂ ಸಾಕ್ಷ್ಯಾಧಾರಗಳಿವೆಯೆ? ಎಂಬುದನ್ನು ಖಚಿತಪಡಿಸಿಕೊಳ್ಳಲು ಮೊಕದ್ದಮೆಯ ದಿನಚರಿಯನ್ನು ಪಡೆಯುವುದು ನ್ಯಾಯಾಲಯದ ಕರ್ತವ್ಯವಾಗಿದೆ. ಮಾನ್ಯ ಸೆಷನ್ಸ್ ನ್ಯಾಯಾಧೀಶರು ಇದನ್ನು ಮಾಡಿರುವುದಿಲ್ಲವೆಂದು ಅಥವಾ ತನಿಖಾ ಏಜೆನ್ಸಿಯು ನ್ಯಾಯಾಲಯದ ಮುಂದೆ ಮೊಕದ್ದಮೆಯ ದಿನಚರಿಯನ್ನು ಹಾಜರುಪಡಿಸಿರುವುದಿಲ್ಲವೆಂದು ಕಂಡುಬರುತ್ತದೆ.

5. ಈ ನ್ಯಾಯಾಲಯದ ಮುಂದೆಯೂ ಸಹ, ಸದರಿ ತೊಂದರೆಗೆ ಸಿಲುಕಿದ್ದ ಮಹಿಳೆಯಾದ ಕವಿತಳನ್ನು ಪೊಲೀಸರು ವಿಚಾರಣೆ ನಡೆಸಿರುವುದಕ್ಕೆ ಅಥವಾ ಯಾವುದೇ ಹೇಳಿಕೆಯನ್ನು ದಾಖಲಿಸಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ಮೊಕದ್ದಮೆ ದಿನಚರಿ (ಕೇಸ್ ಡೈರಿ) ಲಭ್ಯವಿದೆಯೇ? ಅಥವಾ ಯಾವುದೇ ಮಾಹಿತಿ ಲಭ್ಯವಿದೆಯೆ? ಎಂಬ ಬಗ್ಗೆ ನ್ಯಾಯಾಲಯವು ಮಾನ್ಯ ಹೆಚ್ಚುವರಿ ಎಸ್‌ಪಿಪಿ ಅವರನ್ನು ಪ್ರಶ್ನಿಸಿತು. ಮಾನ್ಯ ಹೆಚ್ಚುವರಿ ಎಸ್‌ಪಿಪಿಯವರು, ನಡೆಸಲಾದ ತನಿಖೆಯ ಸ್ವರೂಪ ಮತ್ತು ತನಿಖೆಯ ಹಂತ ಹಾಗೂ ಆಪಾದಿತನ ವಿರುದ್ಧ ಸಂಗ್ರಹಿಸಲಾದ, ಅಪರಾಧದಲ್ಲಿ ಸಿಕ್ಕಿಸುವ ಸಾಕ್ಷ್ಯಾಧಾರಗಳ ಬಗ್ಗೆ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡುವ ಸಲುವಾಗಿ ಮೊಕದ್ದಮೆಯ ದಿನಚರಿಯೊಂದಿಗೆ ಎಲ್ಲಾ ಸಾಕ್ಷ್ಯಾಧಾರಗಳನ್ನು ಒದಗಿಸಲು ತನಿಖಾಧಿಕಾರಿಯನ್ನು ಕೋರಲಾಗಿದೆಯೆಂದು ಈ ನ್ಯಾಯಾಲಯದ ಮುಂದೆ ಜವಾಬ್ದಾರಿಯುತವಾಗಿ ತಿಳಿಸಿದ್ದಾರೆ. ಆದರೆ ತನಿಖಾಧಿಕಾರಿಯು ಮೊದಲು ಮಾಹಿತಿ ವರದಿಯ (ಎಫ್‌ಐಆರ್) ಪ್ರತಿಯನ್ನು ಒದಗಿಸಿರುವುದನ್ನು ಹೊರತುಪಡಿಸಿದರೆ, ಬೇರಾವುದೇ ಸಾಕ್ಷ್ಯಾಧಾರಗಳನ್ನು ಒದಗಿಸಿರುವುದಿಲ್ಲ ಅಥವಾ ತೊಂದರೆಗೆ ಸಿಲುಕಿದ್ದಾಕೆಯ ಹೇಳಿಕೆಯನ್ನು ದಾಖಲಿಸಲಾಗಿದೆಯೆ? ಅಥವಾ ಇಲ್ಲವೆ? ಎಂಬ ಬಗ್ಗೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಆದುದರಿಂದ 06.06.2015 ರಿಂದ ಸದರಿ ಮಹಿಳೆಯು ಹಾಜರಿದ್ದ ಬಳಿಕವೂ ಸಹ, ಸದರಿ ಮಹಿಳೆಯ ಯಾವುದೇ ಹೇಳಿಕೆಯನ್ನು ದಾಖಲಿಸಲಾಗಿದೆಯೆ? ಮತ್ತು ಹಾಗಿದ್ದಲ್ಲಿ, ಅದನ್ನು ನ್ಯಾಯಾಲಯದ ಮುಂದೆ ಏಕೆ ಹಾಜರುಪಡಿಸಿಲ್ಲ ಹಾಗೂ ಅದನ್ನು ಏಕೆ ಮರೆಮಾಚಲಾಗಿದೆ ಎಂಬ ಬಗ್ಗೆ ತನಿಖಾ ಏಜೆನ್ಸಿಯ ವರ್ತನೆಯು ಸಂಶಯ ಹುಟ್ಟಿಸುತ್ತದೆ.

6. ಇದು ಒಂದೆರಡು ದಿನಗಳ ವಿಷಯವಾಗಿಲ್ಲದಿರುವುದರಿಂದ, ಅವಳು ತನ್ನ ಮಗುವಿನೊಂದಿಗೆ ಅರ್ಜಿದಾರನ ಜೊತೆ ಇದ್ದಳೆಂದು ಆಪಾದಿಸಲಾಗಿರುವುದರಿಂದ, ಸದರಿ ಮಹಿಳೆಯು ಸ್ವಯಿಚ್ಛೆಯಿಂದ ಅರ್ಜಿದಾರನ ಜೊತೆಯಲ್ಲಿ ಹೋಗಿದ್ದಳೆ? ಎಂಬುದನ್ನು ನ್ಯಾಯಾಲಯವು ಈ ಹಂತದಲ್ಲಿ ಖಚಿತಪಡಿಸುವ ಸ್ಥಿತಿಯಲ್ಲಿಲ್ಲ. ಇದು ದಿನಾಂಕ 02.11.2014 ರಿಂದಲೇ ಈ ಮಹಿಳೆ ತನ್ನ ಮಗುವಿನೊಂದಿಗೆ ತಮ್ಮ ಮನೆಯಿಂದ ಕಾಣೆಯಾಗಿದ್ದಳೆಂಬ ನಿರ್ದಿಷ್ಟ ಆಪಾದನೆಯಾಗಿದೆ. ಅರ್ಜಿದಾರ ಮತ್ತು ಸದರಿ ಮಹಿಳೆಯ ನಡುವೆ ಯಾವುದೇ ಅನೈತಿಕ ವ್ಯವಹಾರವಿತ್ತೆ? ಅಥವಾ ಅವರಿಬ್ಬರೂ ಮುಂಬೈನಲ್ಲಿ ಸಂತೋಷವಾಗಿ ಬಾಳಲು ಜೊತೆಯಾಗಿ ಹೋಗಿದ್ದರೆ? ಮತ್ತು ಈ ಅರ್ಜಿದಾರನ ನಡತೆ ಏನು? ಹಾಗೂ ಅವನು ಮಾನವ ಕಳ್ಳಸಾಗಾಣಿಕೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿರುವ ರೂಢಿಗತ ಅಪರಾಧಿಯೇ? ಎಂಬ ಎಲ್ಲಾ ಸಂಗತಿಗಳನ್ನು, ಪ್ರಕರಣದ ದಿನಚರಿಯನ್ನು ಹಾಜರುಪಡಿಸುವ ಮೂಲಕ ನ್ಯಾಯಾಲಯಕ್ಕೆ ತಿಳಿಯಪಡಿಸಿರುವುದಿಲ್ಲ.

7. ಸಕಾಲದಲ್ಲಿ ತನಿಖಾಧಿಕಾರಿಯು ಸಹಕಾರ ನೀಡದಿದ್ದುದರಿಂದ ಹೆಚ್ಚುವರಿ ರಾಜ್ಯ ಅಭಿಯೋಜಕರು ನ್ಯಾಯಾಲಯದ ಮುಂದೆ ಅಸಹಾಯಕರಾದರು. ಆದುದರಿಂದ, ಈ ನ್ಯಾಯಾಲಯವು, ಪ್ರಕರಣದ ದಿನಚರಿಯನ್ನು ಹಾಜರುಪಡಿಸದಿರುವುದರಿಂದ ಮತ್ತು ತನಿಖೆಯ ಹಂತಕ್ಕೆ ಸಂಬಂದಿಸಿದಂತೆ ಯಾವುದೇ ಮಾಹಿತಿಯನ್ನು ಹಾಗೂ ಆಪಾದಿತನ ವಿರುದ್ಧ ಸಂಗ್ರಹಿಸಲಾದ ಸಾಕ್ಷ್ಯಾಧಾರಗಳನ್ನು ನ್ಯಾಯಾಲಯಕ್ಕೆ ನೀಡದಿರುವುದರಿಂದ, ಅರ್ಜಿದಾರನಿಗೆ ಜಾಮೀನು ನೀಡಲು ಅದಷ್ಟೇ ಸಾಕಾಗುತ್ತದೆಂದು ಅಭಿಪ್ರಾಯಪಟ್ಟಿದೆ. ಏಕೆಂದರೆ ಪ್ರಾಸಿಕ್ಯೂಷನ್ ಎಫ್‌ಐಆರ್ ಹೊರತುಪಡಿಸಿ ಆಪಾದಿತನ ವಿರುದ್ಧ ಯಾವುದೇ ಸಂಬಂಧಿತ ಸಾಕ್ಷ್ಯಾಧಾರಗಳನ್ನು ತೋರಿಸಿಲ್ಲವೆಂಬುದು ಏನೂ ಹೇಳದಿದ್ದರೂ ಅರ್ಥವಾಗುತ್ತದೆ. ಅರ್ಜಿದಾರನ ಮತ್ತು ತೊಂದರೆಗೆ ಸಿಲುಕಿದ ಮಹಿಳೆಯ ಪೂರ್ವನಡತೆ ಹಾಗೂ ಸದರಿ ಮಹಿಳೆ ತನ್ನ ಪತಿಯ ಮನೆಯನ್ನು ಬಿಟ್ಟುಹೋದ ನಂತರ ಏನು ನಡೆಯಿತೆಂಬ ಬಗ್ಗೆ ಯಾವುದನ್ನು ಎಫ್‌ಐಆರ್ ಬಹಿರಂಗಪಡಿಸುವುದಿಲ್ಲ. ನಿರ್ದಿಷ್ಟವಾಗಿ, ದಂಡ ಪ್ರಕ್ರಿಯಾ ಸಂಹಿತೆಯ 439 ನೇ ಪ್ರಕರಣದ ಅಡಿಯಲ್ಲಿ ಅರ್ಜಿಗಳನ್ನು ಸಲ್ಲಿಸಲಾದಂಥ ಪ್ರಕರಣಗಳಲ್ಲಿ,

ನ್ಯಾಯಾಲಯ ಅಥವಾ ಪ್ರಾಸಿಕ್ಯೂಷನ್, ತನಿಖೆಯ ಇತ್ಯರ್ಥದ ಅವಧಿಯಲ್ಲಿ ಅಥವಾ ಆರೋಪಪಟ್ಟಿಯನ್ನು ಸಲ್ಲಿಸಿದ ನಂತರ ವ್ಯಕ್ತಿಯನ್ನು ವಶಕ್ಕೆ ತೆಗೆದುಕೊಂಡು, ಸಂವಿಧಾನದ ಅಡಿಯಲ್ಲಿ ಖಾತರಿಪಡಿಸಲಾದ, ವ್ಯಕ್ತಿಯ ಸ್ವಾತಂತ್ರ್ಯದ ಹಕ್ಕನ್ನು ಮೊಟಕುಗೊಳಿಸಬೇಕಿದ್ದಾಗ, ಪೊಲೀಸರು ನ್ಯಾಯಾಲಯದಲ್ಲಿ ಪ್ರಾಸಿಕ್ಯೂಟಿಂಗ್ ಏಜೆನ್ಸಿಗೆ ಅದರಲ್ಲೂ ನಿರ್ದಿಷ್ಟವಾಗಿ ಪಬ್ಲಿಕ್ ಪ್ರಾಸಿಕ್ಯೂಟರುಗಳು ಮತ್ತು ಉಚ್ಚ ನ್ಯಾಯಾಲಯದ ಗೌರ್ನಮೆಂಟ್ ಪ್ಲೀಡರುಗಳೂ, ನ್ಯಾಯಾಲಯದ ಮುಂದೆ ವಾದಗಳನ್ನು ಸೂಕ್ತವಾಗಿ ಮಂಡಿಸಲು ಅವರಿಗೆ ಸಾಧ್ಯವಾಗುವ ಹಾಗೆ ಗೌರ್ನಮೆಂಟ್ ಅಡ್ವೊಕೇಟ್‌ಗಳಿಗೆ ಅಗತ್ಯವಿರುವ ಪ್ರಕರಣದ ಕಡತವನ್ನು ಒದಗಿಸುವ ಮೂಲಕ ಹಾಗೂ ನ್ಯಾಯಾಲಯವು ಸೂಕ್ತ ಆದೇಶಗಳನ್ನು ಜಾರಿಮಾಡಲು ಆಪಾದಿತರ ವಿರುದ್ಧ ಲಭ್ಯವಿರುವ ಸಂಬಂಧಿತ ಸಾಕ್ಷ್ಯಾಧಾರಗಳಿಗೆ ಸಂಬಂಧಿಸಿ ನ್ಯಾಯಾಲಯಕ್ಕೆ ತಿಳಿಯಪಡಿಸುವ ಮೂಲಕ ಸಹಕಾರ ನೀಡಬೇಕಿರುತ್ತದೆ. ಇಲ್ಲದಿದ್ದಲ್ಲಿ, ಆಪಾದಿತನ ವಿರುದ್ಧ ಯಾವುವೇ ಸಂಬಂದಿತ ಸಾಕ್ಷ್ಯಾಧಾರಗಳು ಇಲ್ಲದಿದ್ದರೂ, ಆಪಾದಿತನು ಪೊಲೀಸರ ವಶದಲ್ಲಿರುವುದು ಮುಂದುವರೆದಿದ್ದಲ್ಲಿ, ಅದು ಖಂಡಿತವಾಗಿಯೂ, ಭಾರತದ ಸಂವಿಧಾನದ ಅಡಿಯಲ್ಲಿ ಮಾನ್ಯತೆ ನೀಡಲಾದ ಸಿಂಧುವಾದ ಹಕ್ಕಾಗಿರುವ ನಾಗರಿಕನ ಸ್ವಾತಂತ್ರ್ಯದ (ಬಿಡುಗಡೆಯ) ಹಕ್ಕನ್ನು ಉಲ್ಲಂಘಿಸುತ್ತದೆ.

8. ಆದುದರಿಂದ, ಇಂಥ ಪ್ರಕರಣಗಳಲ್ಲಿ ಎಚ್ಚರವಹಿಸಲು ಮತ್ತು ಕಾನೂನು ನ್ಯಾಯಾಲಯಗಳ ಮುಂದೆ ಸಲ್ಲಿಸಲಾದ ಜಾಮೀನು ಅರ್ಜಿಗಳನ್ನು ಸಮರ್ಥಿಸುವ ಅಥವಾ ವಿರೋಧಿಸುವ ಸಲುವಾಗಿ ಪ್ರಾಸಿಕ್ಯೂಟರುಗಳು ಮತ್ತು ಗೌರ್ನಮೆಂಟ್ ಅಡ್ವೊಕೇಟ್‌ಗಳಿಗೆ ಅಗತ್ಯವಿರುವ ಎಲ್ಲಾ ದಾಖಲೆಗಳೊಂದಿಗೆ ಸಹಕರಿಸಲು ಎಲ್ಲಾ ತನಿಖಾಧಿಕಾರಿಗಳಿಗೆ ಸೂಚಿಸಲು ನಿರ್ದಿಷ್ಟವಾಗಿ ಹಾಗೂ ಸಾಮಾನ್ಯವಾಗಿ ಈ ಪ್ರಕರಣದಲ್ಲಿ ಸಂಬಂಧಪಟ್ಟ ವ್ಯಕ್ತಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ನಿರ್ದೇಶಿಸುವುದರೊಂದಿಗೆ ಕರ್ನಾಟಕ ರಾಜ್ಯದ ಪೊಲೀಸ್ ಮಹಾ ನಿರ್ದೇಶಕರಿಗೆ ಈ ಆದೇಶದ ಪ್ರತಿಯನ್ನು ಕಳುಹಿಸಲು ಕಛೇರಿಗೆ ನಿರ್ದೇಶಿಸುವುದು ನ್ಯಾಯಸಮ್ಮತ ಹಾಗೂ ಅಗತ್ಯವೆಂದು ನಾನು ಭಾವಿಸುತ್ತೇನೆ.

9. ಈ ಅಭಿಪ್ರಾಯೋಕ್ತಿಗಳೊಂದಿಗೆ ನಿರ್ದಿಷ್ಟವಾಗಿ ಈ ಪ್ರಕರಣದಲ್ಲಿ ಪ್ರಾಸಿಕ್ಯೂಟಿಂಗ್ ಏಜೆನ್ಸಿಯು ಆಪಾದಿತನು ಅಂಥ ಅಪರಾಧಗಳನ್ನು ಎಸಗಿದ್ದಾನೆಂದು ತೋರಿಸಲು ಯಾವುದೇ ಸಾಕ್ಷ್ಯಾಧಾರಗಳನ್ನು ಹೊಂದಿದ್ದಲ್ಲಿ ಮತ್ತು ಅವರು ಯಾವುದೇ ನಿರಾಕರಿಸಲಾಗದ ಮೇಲ್ನೋಟದ ಸಾಕ್ಷ್ಯಾಧಾರಗಳನ್ನು ಹೊಂದಿದ್ದರೆ, ಅವರಿಗೆ, ನ್ಯಾಯಾಲಯದ ಮುಂದೆ ಅಗತ್ಯ ದಾಖಲೆಗಳನ್ನು ಹಾಜರುಪಡಿಸುವ ಮೂಲಕ ಜಾಮೀನಿನ ರದ್ದುಪಡಿಸುವಿಕೆಗೆ ಕೋರಲು ಸ್ವಾತಂತ್ರ್ಯವಿದೆ. ಆ ನಿಗದಿತ ಅವಧಿಯವರೆಗೆ, ಅರ್ಜಿದಾರನ ಬಿಡುಗಡೆಯ ಹಕ್ಕನ್ನು ಮೊಟಕುಗೊಳಿಸಲಾಗುವುದಿಲ್ಲ. ಹೀಗಾಗಿ, ನಾನು ಈ ಕೆಳಗಿನ ಆದೇಶವನ್ನು ಹೊರಡಿಸಿರುತ್ತೇನೆ.

**ಆದೇಶ**

ಅರ್ಜಿಯನ್ನು ಪುರಸ್ಕರಿಸಲಾಗಿದೆ. ತದನುಸಾರವಾಗಿ, ಈ ಕೆಳಗಿನ ಷರತ್ತುಗಳಿಗೊಳಪಟ್ಟು ಔರಾದ್‌ನ ಜೆಎಂಎಫ್‌ಸಿಯ ಕಡತದಲ್ಲಿ ಬಾಕಿ ಇರುವ ಭಾರತ ದಂಡ ಸಂಹಿತೆಯ ಕಲಂ 34 ರ ಜೊತೆಗೋದಿದಂತೆ ಕಲಂ 344, 345, 347, 365, 366, 367, 368, 370 (2) ರಡಿಯಲ್ಲಿನ ಅಪರಾಧಗಳಿಗಾಗಿ ಹೊಕರಣ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ. 70/2015 ಕ್ಕೆ ಸಂಬಂಧಿಸಿದಂತೆ ಜಾಮೀನಿನ ಮೇಲೆ ಅರ್ಜಿದಾರನನ್ನು ಬಿಡುಗಡೆಮಾಡತಕ್ಕದ್ದು:

i) ಅರ್ಜಿದಾರನು ಅಧಿಕಾರವ್ಯಾಪ್ತಿಯಲ್ಲಿನ ಒಪ್ಪಿಸುವ ನ್ಯಾಯಾಲಯಕ್ಕೆ ಸಮ್ಮತವಾಗುವಂತೆ ಎರಡು ಧನಾನುಕೂಲ ಶ್ಯೂರಿಟಿಗಳೊಂದಿಗೆ ರೂ.1,00,000/– (ರೂ. ಒಂದು ಲಕ್ಷ ಮಾತ್ರ) ರ ಮೊತ್ತಕ್ಕೆ ವೈಯಕ್ತಿಕ ಬಾಂಡನ್ನು ಬರೆದುಕೊಡತಕ್ಕದ್ದು.

ii) ಅರ್ಜಿದಾರನು ತನಿಖೆಗೆ ತಡೆಯೊಡ್ಡುವುದರಲ್ಲಿ ಮತ್ತು ಪ್ರಾಸಿಕ್ಯೂಷನ್ ಸಾಕ್ಷ್ಯಗಳನ್ನು ಅಕ್ರಮವಾಗಿ ತಿದ್ದುವಲ್ಲಿ ತೊಡಗಿರತಕ್ಕದ್ದಲ್ಲ.

iii) ಅರ್ಜಿದಾರನು ತನಿಖಾಧಿಕಾರಿಯು ಮುಂದೆ ವಾರಕ್ಕೊಮ್ಮೆ ಅಂದರೆ, ಪ್ರತಿ ಭಾನುವಾರ ಹಾಜರಾಗತಕ್ಕದ್ದು ಮತ್ತು ಎರಡು ತಿಂಗಳು ಅವಧಿಗಾಗಿ ಅಥವಾ ಆರೋಪ ಪಟ್ಟಿಯನ್ನು ಸಲ್ಲಿಸುವವರೆಗೆ – ಇವೆರಡರಲ್ಲಿ ಯಾವುದು ಮೊದಲೋ ಅದಕ್ಕಾಗಿ ಬೆಳಿಗ್ಗೆ 10–00 ಗಂಟೆಯಿಂದ ಸಂಜೆ 5–00 ಗಂಟೆಯ ನಡುವೆ ತನ್ನ ಹಾಜರಾತಿಯನ್ನು ಗುರುತಿಸತಕ್ಕದ್ದು.

iv) ಅರ್ಜಿದಾರನು ಯಾವುದೇ ಪ್ರಾಮಾಣಿಕ ಕಾರಣದಿಂದ ತಡೆಯದ ಹೊರತು, ಮುಂದಿನ ಎಲ್ಲಾ ಸುನಾವಣೆ ದಿನಾಂಕಗಳಂದು ಅಧಿವಿಚಾರಣಾ ನ್ಯಾಯಾಲಯದ ಮುಂದೆ ಸಹ ಹಾಜರಾಗತಕ್ಕದ್ದು.